ಪೇಂಟರ್ ಪಾಪು, ಸಂತೇಮರಹಳ್ಳಿ

*ಮದುವೆಯಾದರೂ ಮತ್ತೊಂದು ಹುಡುಗಿಯನ್ನು ನೋಡುತ್ತಾರಲ್ಲಾ, ಯಾಕೆ ಬಾಸ್?*



ಗುಣಮಟ್ಟ ತಿಳಿಯಬೇಕಾದರೆ ಹೋಲಿಸುವುದು ಅಗತ್ಯವಂತೆ.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

*ಉದ್ಘಾಟನೆಯಲ್ಲಿ ದೀಪ ಬೆಳಗಿಸುವಂತೆ ಮುಕ್ತಾಯ ಸಮಾರಂಭದಲ್ಲಿ ದೀಪ ಆರಿಸುವುದಿಲ್ಲವೇಕೆ?*

ಉಫ್ ಅಂದ ತಕ್ಷಣ ಹ್ಯಾಪಿ ಬರ್ತ್‌ಡೇ ಟೂ ಯೂ ಎನ್ನುತ್ತಾ ಕೇಕ್ ಕೊಡಿ ಎಂದು ಕ್ಯೂ ನಿಂತುಬಿಟ್ಟಾರೆಂದು.

ಎಚ್.ಆರ್. ದೇಸಾಯಿ, ರಾಯಚೂರು

*ಪ್ರಾಣಿಗಳನ್ನು ನೋಡಬೇಕಾದರೆ ಮೃಗಾಲಯಕ್ಕೆ ಹೋಗಬೇಕು. ಮನುಷ್ಯತ್ವ ಇರುವ ಮನುಷ್ಯರನ್ನು ನೋಡಬೇಕಾದರೆ?*

ನಿಮ್ಮ ಒಳಗೇ ನೋಡಿಕೊಳ್ಳಿ. ಅಲ್ಲಿ ಇಲ್ಲದಿದ್ದರೆ ಇನ್ನೆಲ್ಲಿ ಹುಡುಕಿದರೂ ಕಾಣಿಸುವುದಿಲ್ಲ.

ಜೆ.ಸಿ. ರವಿಕುಮಾರ್, ಜಯಸುವರ್ಣಪುರ

*ಸರ್ಕಾರಿ ಶಾಲೆಗಳಲ್ಲಿ ಓದಿ ಬರೆದವರೇ ಸರ್ಕಾರಿ ಶಾಲೆಗಳನ್ನು ದ್ವೇಷಿಸುತ್ತಾರಲ್ಲಾ, ಏಕೆ?*

ಜಗನಿಯಮ. ಬೆಳೆಯುವಾಗ ಸಸಿಗೆ ಕಾಂಪೌಂಡೇ ರಕ್ಷಣೆ. ಬೆಳೆದಂತೆ ಮರದ ಬೇರುಗಳಿಂದಲೇ ಆ ಕಾಂಪೌಂಡಿಗೆ ಧಕ್ಕೆ!

ಬಿ.ಎಸ್.ನಾರಾಯಣಸ್ವಾಮಿ, ಬೋಧನಹೊಸಹಳ್ಳಿ

*ಉರಿಬಿಸಿಲಿಗೆ ತಂಗಾಳಿಯಾದವಳು; ಕೊರೆವ ಚಳಿಗೆ ಕಂಬಳಿಯಾದವಳು; ಸುರಿವ ಮಳೆಗೆ ಕೊಡೆಯಾದವಳು; ಈಗ ಮೌನವಾಗಿದ್ದಾಳಲ್ಲ?*

ಸರಿಯೇ. ನಿಮ್ಮನ್ನು ನಂಬಿಕೊಂಡರೆ ಅವಳಿಗೆ ಸನ್‌ಬರ್ನ್, ಫ್ರಾಸ್ಟ್‌ಬೈಟ್, ನ್ಯುಮೋನಿಯ ಬರುವುದೆಂದು ತಿಳಿಯಿತಲ್ಲ.

ಎಂ.ವಿ. ವೆಂಕಮ್ಮ, ಬಳ್ಳಾರಿ

*ನರಿಬಾಲ ತುಳಿದರೆ ಕೋಟ್ಯಧಿಪತಿ. ಏನು ತುಳಿದರೆ ಭಿಕ್ಷಾಧಿಪತಿ?*

ಕೋರ್ಟ್ ಮೆಟ್ಟಿಲು.

ಮಹಾವೀರ ಕಾಸರ, ಶಿವಮೊಗ್ಗ

*ಹೆಸರಾಂತ ಸಾಹಿತಿಗಳು ತಿಕ್ಕಲುತನದ ಹೇಳಿಕೆಗಳನ್ನು ನೀಡುವುದಕ್ಕೆ ಕಾರಣವೇನು?*

'ಹೆಸರಾಂತ' ಎಂಬ ಬಿರುದು ಬರಲು ಅದೇ ಕಾರಣವಂತೆ.

ಅಣಜಿ ಮಂಜುನಾಥ್, ಮಾಧವನ ಬಾವಿ

*ಮುತ್ತು, ಮತ್ತು ಹಾಗೂ ಕಿಮ್ಮತ್ತಿಗೆ ಇರುವ ವ್ಯತ್ಯಾಸವೇನು?*

ಅಧರಕ್ಕೊಂದು, ಸದರಕ್ಕೊಂದು, ಸಾದರಕ್ಕೊಂದು.

ಗೌರಿ ಶೇಷಾದ್ರಿ, ಉತ್ತನಹಳ್ಳಿ

*ಹಗಲು, ರಾತ್ರಿ ನಡೆವ ಎಲ್ಲ ಕೆಟ್ಟ ಕೆಲಸಗಳಿಗೆ ಸಾಕ್ಷಿಯಾಗುವ ಸೂರ್ಯ, ಚಂದ್ರ ಕೋರ್ಟಿಗೆ ಬಂದು ಸಾಕ್ಷಿ ನುಡಿದರೆ ಏನಾಗುತ್ತದೆ ಸಾರ್?*

ಹಗಲು, ರಾತ್ರಿಗಳು ಅಡ್ಜರ್ನ್ ಆಗುತ್ತವೆ.

ಸಿಹಿಮೊಗೆ ರಮೇಶ್, ಮೈಸೂರು

*ಕಾಯಕವೇ ಕೈಲಾಸವೋ, ಅಥವಾ ಕಾಯವೇ ಕೈಲಾಸವೋ?*

ತೇದಿ ಒಂದರಿಂದ ಇಪ್ಪತ್ತರವರೆಗೆ ಕಾಯಕವೇ ಕೈಲಾಸ. ಇಪ್ಪತ್ತೊಂದರಿಂದ ಮೂವತ್ತರವರೆಗೆ ಕೈಸಾಲವೇ ಕಾಯಕ.

ರವೀಂದ್ರನಾಥ. ಶಿ. ಯಡಹಳ್ಳಿ, ಬೀಳಗಿ

*ಬಿಸಿನೆಸ್ ಪಾರ್ಟ್‌ನರ್‌ಗೂ, ಲೈಫ್ ಪಾರ್ಟ್‌ನರ್‌ಗೂ ಇರುವ ವ್ಯತ್ಯಾಸವೇನು ಗುರೂಜಿ?*

ಒಂದು ಸಾರ ಇರುವವರೆಗೆ, ಇನ್ನೊಂದು ಸಂಸಾರ ಇರುವವರೆಗೆ.

ಮಲ್ಲಿಕಾರ್ಜುನ. ಹ. ಬಗಲಿ, ಜತ್ತ

*ಗಂಡಹೆಂಡಿರ ಕಲಹವನ್ನು ನೋಡಬಹುದು. ಕಲಹದ ನಂತರ ರಾಜಿಯಾಗುವುದನ್ನು ಯಾರೂ ತಪ್ಪಿಯೂ ನೋಡಬಾರದಂತೆ. ಏಕೆ?*




ಕಡಿದರೆ ನಾಲ್ಕಾಳಾಗುವಂತಹ ದಾಂಡಿಗ ಗಂಡ ಸತಿಯನ್ನು ಮಂಡಿಯೂರಿ ಬೇಡಿಕೊಳ್ಳುವ ದೃಶ್ಯ ಹೃದಯವಿದ್ರಾವಕವಾಗಿರುವುದರಿಂದ.

## ಬಹುಮಾನಿತ ಪ್ರಶ್ನೆ

ರಮೇಶ್, ಹನುಮನಾಳು, ಬನ್ನೂರು

*ಉನ್ನತ ಸ್ಥಾನಕ್ಕೆ ಬಂದವರೆಲ್ಲಾ ತುಂಬಾ ಬಡತನದಿಂದ ಬಂದೆ ಅನ್ನುತ್ತಾರೆ. ಆದರೆ ಬಡವರಿಗೆ ಸಹಾಯ ಮಾಡುವುದಿಲ್ಲ. ಏಕೆ?*

ಹಣದ ಶ್ರೀಮಂತಿಕೆ ಏರುತ್ತಿದ್ದಂತೆ ಹೃದಯ ಶ್ರೀಮಂತಿಕೆ ಕಡಿಮೆಯಾಗುತ್ತಾ ಬರುವುದರಿಂದ.

ಜಾಕೋಬ್ ಡಿಸೋಜ, ಕುರುವಳ್ಳಿ

*ನಮ್ಮ ಜಾತ್ಯತೀತ ರಾಜ್ಯದಲ್ಲಿ ಇರುವ ಜಾತಿಗಳೆಷ್ಟು?*

ಎರಡೇ – ಶ್ರಮಜೀವಿ ಎಂಬ ಉತ್ತಮ ಕುಲ, ಬುದ್ಧಿಜೀವಿ ಎಂಬ ಕುಲಗೆಟ್ಟ ಕುಲ.

ಎನ್.ಎಸ್. ಆನಂದ್, ಬೆಂಗಳೂರು

*ಎರಡು ಜಡೆ, ಒಂದು ಜುಟ್ಟು ಮಿಲನವಾದಾಗ ಫಲಿತಾಂಶ ಸರಸವೋ, ವಿರಸವೋ?*

ಇವೆರಡರ ಮಿಲನವಾಗುವುದು ಯೂನಿಸೆಕ್ಸ್ ಬ್ಯೂಟಿ ಪಾರ್ಲರ್‌ನಲ್ಲೇ. ಫಲಿತಾಂಶ ಸರಸ ಅಲ್ಲ; ಸರಕು – ನಯವಾದ, ಉದ್ದವಾದ ಚೌರಿ!

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್

*ನೈಂಟಿ ಹಾಕಿದ ಮೇಲೆ ಹುಡುಗಿಯರೆಲ್ಲಾ ನೈಟಿ ಹಾಕಿದ ಹಾಗೆ ಕಾಣ್ತಾರಲ್ಲಾ..?*

ಅವರು ಹೇಗಾದರೂ ಕಾಣಲಿ. ನಿಮ್ಮ ಅಮಲಿನ ದೃಷ್ಟಿ ಅ–ಮಲಿನ ದೃಷ್ಟಿಯಾಗಿದ್ದರೆ ಸರಿ.

ಆದಿತ್ಯ ಭಾರದ್ವಾಜ್, ಮಂಡ್ಯ

*ವೇದ, ಮಂತ್ರ, ಸ್ತೋತ್ರ, ಜಪ ಹೇಳುವ ಮಕ್ಕಳ ನಾಲಿಗೆಯಲ್ಲಿ ಕೆಟ್ಟ ಕೆಟ್ಟ ಬೈಗುಳಗಳು ಬರುತ್ತವಲ್ಲಾ...?*

ಹಿರಿಯರೇ 'ಓ ಗಾಡ್!'ನಿಂದ 'ಓ ಶಿಟ್!'ಗೆ ಬದಲಾಗಿರುವಾಗ ಸಂಸ್ಕೃತಿಯೂ ಬೇರೆ, ಸಂಸ್ಕೃತವೂ ಬೇರೆ ಆಗುವುದು ಸಹಜವೇ.

ಜಯದೇವ ಹಲಕಿ, ಗೋಕಾಕ

*ಕೆಲವು ಕನ್ನಡದ ಸಂಘಟನೆಗಳು ನಾಯಿಕೊಡೆಗಳಂತೆ ಬೆಳೆಯುವುದರ ಅರ್ಥವೇನು ಸರ್?*

ಕೆಲವು ನಾಯಿಕೊಡೆಗಳು ಪ್ಯಾರಾಸೈಟ್‌ಗಳು. ಇವುಗಳಲ್ಲೂ ಕೆಲವು ಅವೇ ಆದ್ದರಿಂದ ಹಾಗೆಯೇ ಬೆಳೆಯುತ್ತವೆ.

ಮಹಾವೀರ

*ಮನಸ್ಸಿದ್ದರೆ ಮಾರ್ಗ. ಮನಸ್ಸಿಲ್ಲದಿದ್ದರೆ?*

ಪಡಖಾನೆ, ಪಟಾಲಂ, ಪಾರ್ಕ್, ಬಾರ್, ಕ್ಲಬ್, ಗಲ್ಲಿ, ಮೋರಿ...!

ಆರ್. ಮಧುಸೂದನ್, ಹಾಸನ

*ನೋ ಪಾರ್ಕಿಂಗ್ ಅಂತ ಬೋರ್ಡ್ ಹಾಕಿದ್ದರೂ ಹೃದಯದಲ್ಲಿ ಬಂದು ನಿಂತಿದ್ದಾಳಲ್ಲಾ...?*

ನಿಮ್ಮದೇ ತಪ್ಪು. no ಎನ್ನುವ ಬದಲು know

■ ರಾಮ್